ಕಡೆಗೇ ಹೆಚ್ಚು. ಹಾಂ, ಬಾಬೂಜಿ ಇರದಿದ್ದರೆ ಮಾತ್ರ ಇದು ಸಾಧ್ಯ. ಒಂದು ದಿನ ನಾನೂ ಮತ್ತು ಪಾರೂ ಒಳಗಿನ ಕತ್ತಲೆ ಕೋಣೆಯಲ್ಲಿ ಕುಳಿತಿದ್ದೆವು. ಬಚ್ಚಾ ಗೋಡೆಯ ಮೇಲೆ ತೆವಳುತ್ತ ಹೊರಟಿತ್ತು. ನಾವು ಅದರೊಂದಿಗೆ ಮಾತಾಡುತ್ತಲಿದ್ದೆವು. ಪಾರೂಳಿಗೆ ಬಚ್ಚಾನ ಮೇಲೆ ಪ್ರೀತಿ ಮತ್ತು ನನಗೋ ಪಾರೂವಿನ ಮೇಲೆ. ನಾವು ತನ್ಮಯರಾಗಿದ್ದೆವು. ಅಷ್ಟರಲ್ಲಿ ಬಾಬೂಜಿ ಬಂದರು. ಬಾಬೂಜಿ ಸಿಟ್ಟಿನಿಂದ ಬಯ್ದರು. ಅವರ ಕಂಗಳು ಕಿಡಿಕಾರುತ್ತಿದ್ದವು. ನಾನು ನಖಶಿಖಾಂತ ನಡುಗಿದೆ ಅನಿಸಿತು, ಈಗ ಕೀಟವನ್ನು ಹೊಸಕಿ ಬಿಡುತ್ತಾರೆ ಎಂದು. ಆದರೆ, ಅವರ ಕಣ್ಣೋ ನನ್ನನ್ನು ದಿಟ್ಟಿಸುತ್ತಿತ್ತು. ಅಷ್ಟರಲ್ಲಿ ಪಾರೂ ಬಚ್ಚಾನನ್ನು ಒಂದು ಡಬ್ಬಿಯೊಳಗೆ ಇಟ್ಟು ಮುಚ್ಚಿಬಿಟ್ಟಳು. ತಲೆಯ ಮೇಲೆ ಸೆರಗು ಹೊದ್ದು ಅವಳು ಹೊರಟು ಹೋದಳು. ಅನಂತರ ಬಾಬೂಜಿ ಜಬರಿಸಿ ನನ್ನನ್ನು ಹೊರಗೆ ಕರೆದರು. ನಾನು ಹೋದೆ. ಅವರ ಕುರ್ಚಿಯಲ್ಲಿ ಕುಳಿತಿದ್ದರು. ನಾನು ಕೆಳಗೆ, ನನ್ನ ಗೋಣು ಕೆಳಗೆ. ಬಾಬೂಜಿ ನನ್ನ ಬೆನ್ನು ಕೆಂಪು ಮಾಡುತ್ತಾರೆಂದೆನಿಸಿತು. ವೈಸೆ ಅಬ್ ಶೌದಿ ಥಾ ಮೈ. ಜವಾನ. ಆದರೆ, ಬಾಬೂಜಿಗೆ ವಯಸ್ಸಿನ ಯಾವ ಲೆಕ್ಕ? ಈಗಲೂ ಅವರು ನನ್ನನ್ನು ಹೊಡೆಯುತ್ತಿದ್ದರು. ಮಗರ್ ಇಸ್ ಬಾರ್ ವೋ ದೇರ್ ತಕ್ ಖಾಮೋಶ್ ಬೈಠೆ. ಬಳಿಕ ಮಾತಿಗೆ ಶುರು ಮಾಡಿದರು. 'ಮಗನೆ, ನಾನು ಈಗ ಹೇಳುವುದು ಆಯುಷ್ಯವಿಡೀ ನೆನಪಿನಲ್ಲಿರಲಿ. ಪ್ಯಾರ್ ಮಮತಾ, ಮಾಯಾ, ದಯಾ ಇನ್‌ಸಬ್ ಕಾ ಕುಛ ಕಾಮ್ ನಹೀ ಹೋತಾ ಜಿಂದಗಿ ಮೇ. ಮನುಷ್ಯ ಪುಕ್ಕಲು ಆಗಿರುತ್ತಾನೆ. ಹೇಡಿಯಾಗಿರುತ್ತಾನೆ. ಆಗವನಿಗೆ ಇಂಥ ವಿಷಯಗಳು ಬೇಕಾಗುತ್ತವೆ. ಶಕ್ತಿವಂತನಿಗೆ, ಬಲಿಷ್ಠನಾದವನಿಗೆ ಇದರ ಅಗತ್ಯವಿಲ್ಲ. ಅವನಿಗೆ ಬೇಕಾಗಿರುವುದು ನಿರ್ದಯತೆ, ನಿರ್ಮಮತೆ. ಮನುಷ್ಯ ಮೂಲತಃ ಸ್ವಾರ್ಥಿಯಾಗಿದ್ದಾನೆ. ಸ್ವಾರ್ಥವು ಬಲಿಷ್ಠನನ್ನು ಮತ್ತಷ್ಟು ಬಲಿಷ್ಠನನ್ನಾಗಿ ಮಾಡುತ್ತದೆ. ಎಲ್ಲಕ್ಕಿಂತ ಸುಂದರವಾಗಿರುವುದು ಮನುಷ್ಯರ ದೇಹ. ಆ ದೇಹದ ಬಗೆಗೆ ಯೋಚಿಸುವುದು, ಸ್ವಂತಕ್ಕೆ ಕೇಂದ್ರದಲ್ಲಿರಿಸಿ ಜಗತ್ತಿನ ಬಗೆಗೆ ಯೋಚಿಸುವುದೇ ಅವರ ಜೀವನ ಉದ್ದೇಶವಾಗಿದೆ. ಇದನ್ನು ಈಡೇರಿಸಲು ವಿಶ್ವಾಸಘಾತ, ಸೌದೇಬಾಜಿ, ಅಪ್ರಾಮಾಣಿಕತೆ, ಸುಳ್ಳು–ವಂಚನೆಯ ಅಗತ್ಯವಿರುತ್ತದೆ. ಈ ಫೌಂಡೇಶನ್ ಮಜಬೂತಾಗಿದ್ದರೆ ಮಾತ್ರ ಮನುಷ್ಯನ ವಿಕಾಸವಾಗುತ್ತದೆ. ತೂ ನಿರ್ಬ ಲೋಂಕಿ ಮತ್‌ಸೋಚ್. ಸತ್ಯದ ಬಗೆಗಿನ ಹವ್ಯಾಸ ಬೇಡ, ಈ ಜಗತ್ತೆಲ್ಲ ಕ್ಷುದ್ರವಾಗಿದೆ. ಗುಜರಿಯ ಸಾಮಾನಿನಂತೆ. ಕಸದಲ್ಲೇ ರಸದ ಸ್ವಾರ್ಥವನ್ನು ಸಂರಕ್ಷಿಸಬೇಕಾಗಿದೆ. ಈ ನೆಲದೊಳಗೆ ದಗಲಬಾಜಿ, ಮೋಸ, ಸ್ವಾರ್ಥ, ಯಾಚಕತನದ ಬೀಜಗಳನ್ನು ಸಾವಿರಾರು ವರುಷಗಳಿಗಿಂತ ಮೊದಲೇ ಬಿತ್ತಲಾಗಿದೆ. ಅದರ ಹನ್ನೆರಡೂ ತಿಂಗಳ ಫಸಲು ಇವತ್ತಿಗೂ ಬರಲಾರಂಭಿಸಿದೆ. ಮುಂದೆಯೂ ಸಾವಿರ ವರ್ಷ ಬರುತ್ತಲೇ ಇರುತ್ತದೆ. ಈ ಗುಣಗಳಿಗೆ ಬೆಲೆ ನೀಡುವುದೇ ನಮ್ಮ ದಂಧೆಯಾಗಿದೆ. ನನ್ನ ತಲೆಯೊಳಗಿನ ಒಂದೊಂದೇ ಕಿಟಕಿಯು ತೆರೆಯುತ್ತಲೇ ಇತ್ತು. ನಾನು ಜಡವಾಗಿ ಕುಳಿತೇ ಇದ್ದೆ. ಬಳಿಕ ಬಾಬೂಜಿ ಶಾಂತವಾಗಿ ಕೇಳಿದರು. 'ಫಿರ್ ಬೈಠೋಗೆ ನಾ ತುಮ್ ದುಕಾನ ಪರ್?' 'ಹಾಂ.' ಮೈನೆ ಕಹಾ ಮತ್ತು ಗುಜರಿ ಬಾಬುಯ ಜನಿಸಿದ. ಪ್ರಾಮಾಣಿಕವಾಗಿ ವ್ಯಾಪಾರ, ವಹಿವಾಟು ಮಾಡಿದ. ದಗಲಬಾಜಿಯವರೊಂದಿಗೆ ಅಪ್ರಾಮಾಣಿಕವಾಗಿ ನಡೆದುಕೊಳ್ಳಲಿಲ್ಲ. ಶ್ರೀಮಂತರ ಗೌರವ ಉಳಿಸಿದೆ. ಯಾಚಕತನದ ನಗೆ ಬೀರುವ ಪ್ರಾಕ್ಟಿಸ್ ಮಾಡಿದೆ. ಎಲ್ಲವೂ ಒಮ್ಮೆಲೆ ಸಾಧ್ಯವಾಗಲಿಲ್ಲ. ಆದರೂ ಹೊಂದಾಣಿಕೆ ಮಾಡಿಕೊಂಡೆ. ಆ ನಡುವಿನ ಕಾಲದಲ್ಲಿ ಪಾರೂ ನನ್ನನ್ನು ದಿಟ್ಟಿಸಿ ನೋಡುತ್ತ ಕೂತಿರುತ್ತಿದ್ದಳು. ಮತ್ತೇನೂ ಮಾತಾಡುತ್ತಿರಲಿಲ್ಲ. ಅವಳ ನೋಟದ ಬಗೆಗೆ ನನಗೆ ಭಯವೆನಿಸುತ್ತಿತ್ತು. ರಾತ್ರಿ ನಡುವೆಯೇ ಎಚ್ಚೆತ್ತು ಕೇಳುತ್ತಿದ್ದಳು. 'ಏಕೆ ಮಲಗುತ್ತಿಲ್ಲ?' ನಾನವಳಿಗೆ ಮೋಸ ಮಾಡುತ್ತಿದ್ದೇನೆ ಎಂದೆನಿಸುತ್ತಿತ್ತು. ನನ್ನ ಎದೆಯಲ್ಲಿ ಚಿಕ್ಕ ನೋವು ಕಾಣಿಸಿಕೊಳ್ಳುತ್ತಿತ್ತು. ನಮ್ಮ ಅಂಗಡಿಯ ಬಗೆಗೆ ಅವಳಿಗೆ ಗೊತ್ತಿತ್ತು. ಆದರೆ, ದಂಧೆಯ ಬಗೆಗೆ ಗೊತ್ತಿರಲಿಲ್ಲ. ಆದರೆ,